ಕ್ರ.ಸಂ.	ಪಿಕಪ್ ಹೆಸರು	ಅಂದಾಜು ಮೊತ್ತ	ಷರಾ
2	ಮಣಿಚೆಂಡೂರು–ಸೊರವನಹಳ್ಳಿ	76.85	ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗೆ ರೂ. 20.00 ಲಕ್ಷ ಅನುದಾನ ಒದಗಿಸಿದ್ದು, ಕಾಮಗಾರಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
3	ಮುತ್ಸಂದ್ರ – ಚಿಕ್ಕಮದುರೆ	97.10	ಪ್ರಸಕ್ತ ಸಾಲಿನಲ್ಲಿಈ ಕಾಮಗಾರಿಗೆ ರೂ. 23.97 ಲಕ್ಷ ಅನುದಾನ ಒದಗಿಸಿದ್ದು, ಕಾಮಗಾರಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
4	ಆನೇಮೆಳೆ ಪಾಳ್ಯ – ಪುರದಪಾಳ್ಯ	74.00	2011–12ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು.

ನೆರೆ ಸಂತ್ರಸ್ಥರು

334 (671) ಶ್ರೀ ಮಹದೇವಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ 13 ಜಿಲ್ಲೆಗಳಲ್ಲಿ ಉಂಟಾದ ಅತಿವೃಷ್ಟಿ ಹಿನ್ನೆಲೆಯಲ್ಲಿ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಲು ಗುರುತಿಸಲಾಗಿದೆ; ಈ ಪೈಕಿ ಈಗಾಗಲೇ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಲಾಗಿದೆ ಹಾಗೂ ಸ್ಥಳಾಂತರಗೊಳ್ಳಲು ಎಷ್ಟು ಗ್ರಾಮಗಳು ಬಾಕಿ ಇವೆ ; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಈ ಗ್ರಾಮಗಳಿಗೆ ಜನವರಿ 2011ರ ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಈವರೆಗೆ ಬಿಡುಗಡೆಗೊಂಡಿದ್ದಲ್ಲಿ ಖರ್ಚಾಗಿರುವ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಇ) ಸಂತ್ರಸ್ಥರ ಒಂದು ಮನೆ ನಿರ್ಮಾಣಕ್ಕೆ ಎಷ್ಟು ಮೊತ್ತವನ್ನು ಅಂದಾಜು ಮಾಡಲಾಗಿದೆ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಸ್ಥಳಾಂತರಗೊಳ್ಳಲಿರುವ ಗ್ರಾಮಗಳ ವಿವರ.

ಕ್ರ ಸಂ.	ಜಿಲ್ಲೆಗಳು	ಸ್ಥಳಾಂತರಿಸ ಬೇಕಾದ ಒಟ್ಟು ಗ್ರಾಮಗಳು	ಸ್ಥಳಾಂತರಿಸಿದ ಗ್ರಾಮಗಳು	ಸ್ಥಳಾಂತರದ ಗೊಳ್ಳದ ಗ್ರಾಮಗಳು
1	ಬಾಗಲಕೋಟೆ	60	9	51
2	ಬೆಳಗಾಂ	24	–	24
3	ಬಳ್ಳಾರಿ	18	–	18
4	ಬೀದರ್	03	–	03
5	ಬಿಜಾಪುರ	40	4	36
6	ದಾವಣಗೆರೆ	09	–	09
7	ಧಾರವಾಡ	08	1	07
8	ಗದಗ	14	–	14
9	ಗುಲ್ಬರ್ಗಾ	41	1	40
10	ಹಾವೇರಿ	02	–	02
11	ಕೊಪ್ಪಳ	17	3	14
12	ರಾಯಚಚೂರು	52	11	41
13	ಉತ್ತರ ಕನ್ನಡ	01	1	–
14	ಯಾದಗಿರಿ	06	–	06
	ಒಟ್ಟು	**295**	**30**	**265**

ಆ) ಹಣ ಬಿಡುಗಡೆ ಮಾಡಿರುವ ವಿವರ:

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲಾಧಿಕಾರಿ/ ಸಿ.ಇ.ಓ. ಜಿಪಂ/ ಸಂಸ್ಥೆಗಳು	ಬಿಡುಗಡೆ ಮಾಡಿದ ಹಣ
1	ಜಿಲ್ಲಾಧಿಕಾರಿ, ಬೆಳಗಾಂ	500.00
2	ಜಿಲ್ಲಾಧಿಕಾರಿ, ಬಾಗಲಕೋಟೆ	434.20

ಕ್ರ. ಸಂ.	ಜಿಲ್ಲಾಧಿಕಾರಿ/ ಸಿ.ಇ.ಓ. ಜಿಪಂ/ ಸಂಸ್ಥೆಗಳು	ಬಿಡುಗಡೆ ಮಾಡಿದ ಹಣ
3	ಜಿಲ್ಲಾಧಿಕಾರಿ, ದಾವಣಗೆರೆ	488.80
4	ಜಿಲ್ಲಾಧಿಕಾರಿ, ಬೀದರ್	100.00
5	ಜಿಲ್ಲಾಧಿಕಾರಿ, ರಾಯಚೂರು	1170.00
6	ಜಿಲ್ಲಾಧಿಕಾರಿ, ಬಿಜಾಪುರ	1529.05
7	ಸಿ.ಇ.ಓ., ಜಿ.ಪಂ, ಬಾಗಲಕೋಟೆ	500.00
8	ಸಿ.ಇ.ಓ., ಜಿ.ಪಂ, ಬಿಜಾಪುರ	600.00
9	ಕರ್ನಾಟಕ ಗೃಹ ಮಂಡಳಿ	5000.00
10	ಕೆ.ಆರ್.ಐ.ಡಿ.ಎಲ್. – ಬೆಂಗಳೂರು	10000.00
11	ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ	17579.00
	ಒಟ್ಟು	**37901.05**

ಇ) ಸಂತ್ರಸ್ಥರ ಒಂದು ಮನೆ ನಿರ್ಮಾಣಕ್ಕೆ ಕೆಂಪು ಮಣ್ಣು ಪ್ರದೇಶಗಳಲ್ಲಿ ರೂ. 1.30 ಲಕ್ಷ ಹಾಗೂ ಕಪ್ಪು ಮಣ್ಣು ಪ್ರದೇಶಗಳಲ್ಲಿ ರೂ. 1.40 ಲಕ್ಷ ಮೊತ್ತವನ್ನು ಅಂದಾಜು ಮಾಡಲಾಗಿದೆ.

ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನ

335 (804) ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಸರ್ಕಾರದ ವತಿಯಿಂದ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಕೈಗಾರಿಕೆಗಳ ಸ್ಥಾಪನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ವಿಸ್ತೀರ್ಣ ಎಷ್ಟು; (ಗ್ರಾಮವಾರು ವಿವರ ನೀಡುವುದು)

ಆ) ಸದರಿ ಸ್ವಾಧೀನ ಪ್ರಕ್ರಿಯೆ ಯಾವಾಗ ಪ್ರಾರಂಭಿಸಲಾಗಿದೆ, ಯಾವ ಹಂತದಲ್ಲಿದೆ ಹಾಗೂ ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು;